**O.S.No. 321/2018**
**PW1**

ದಿನಾಂಕ 15.9.2022 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಶ್ರೀ ಎಸ್.ಕೆ.ಟಿ ವಾದಿ ಪರ ವಕೀಲರಿಂದಃ</u>

ಈ ಪ್ರಕರಣದಲ್ಲಿ ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಸಾಕ್ಷಿ ಸಾಗುವಳಿ ಚೀಟಿ ಕೊಡುವ ಬಗೆಗಿನ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-**1** ಎಂದು, ಬೆಳ್ತಂಗಡಿ ತಹಶೀಲ್ದಾರ್ ರವರು ನಡಾವಳಿಯ ನಕಲನ್ನು ನಿಪಿ-**2** ಎಂದು, ನಕ್ಷೆಯ ನಕಲನ್ನು ನಿಪಿ-**3** ಎಂದು, ಎರಡು ರಿಸೀಪ್ಟ್ ಗಳನ್ನು ನಿಪಿ-**4** ಮತ್ತು **5** ಎಂದು, ಒ.ಪಿ. ಚೀಟಿಯನ್ನು ನಿಪಿ-**6** ಎಂದು, ರಿಸೀಪ್ಟನ್ನು ನಿಪಿ-**7** ಮತ್ತು **8** ಎಂದು, ಹೊರರೋಗಿ ಚೀಟಿಗಳನ್ನು ಕ್ರಮವಾಗಿ ನಿಪಿ **9** ರಿಂದ **13** ಎಂದು, ವೈದ್ಯರ ಚೀಟಿಗಳನ್ನು ಕ್ರಮವಾಗಿ ನಿಪಿ -**14** ರಿಂದ **18** ಎಂದು, ಹೊರರೋಗಿ ವಿಭಾಗದ ಚೀಟಿಯನ್ನು ನಿಪಿ-**19** ಎಂದು, ಲ್ಯಾಬೋರೇಟರಿ ಚೀಟಿಗಳನ್ನು ನಿಪಿ-**20** ರಿಂದ **23** ಎಂದು, ಕ್ಯಾಶ್ ಬಿಲ್ಲನ್ನು ನಿಪಿ-**24** ಎಂದು, ಆಸ್ಪತ್ರೆಯ ಚೀಟಿಗಳನ್ನು ನಿಪಿ-**25** ಮತ್ತು **26** ಎಂದು ಗುರುತಿಸಲಾಯಿತು.

(ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ